OPENING OF A POLICE STATION AT HALLUR

897. SMT. RADHA BHAT (Ankola).—

Will the Chief Minister be pleased to state :—

(*a*) whether it is under the consideration of the Government to open a Police Station in Hallur of Ankola Taluk ;

(*b*) if so, when it will be opened ;

(*c*) whether the Police Station will be opened in Amminahalli of Sirsi ?

SRI H. M. CHANNABASAPPA.—(Minister for Public Works and Electricity.) On behalf of Sri D. Devaraj Urs (Chief Minister).—

(*a*) Opening of a Police Station at Hallur in Ankola Taluk was considered and was found that such Police Station was not necessary.

(*b*) Question does not arise

(*c*) Question of opening a Police Out-Post at Amminahalli of Sirsi Taluk is under consideration.

ಶ್ರೀಮತಿ ರಾಧಾ ಭಟ್ : ಹಲ್ಲೂರಿನಲ್ಲಿ ಪೋಲೀಸ್ ಠಾಣೆಯನ್ನು ಸ್ಥಾಪಿಸುವ ಅವಶ್ಯಕತೆ ಕಂಡು ಬರುವುದಿಲ್ಲವೆಂದು ತಿಳಿಸಿದ್ದೀರಿ. ಸರ್ಕಾರದ ದೃಷ್ಟಿಯಲ್ಲಿ ಪೋಲೀಸ ಠಾಣೆಯನ್ನು ಪ್ರಾರಂಭಿಸಲು ಯಾವ್ಯಾವ ಅಗತ್ಯತೆಗಳು ಇರಬೇಕೆಂದು ಹೇಳುತ್ತೀರಾ ?

ಶ್ರೀ ಎಚ್. ಎಂ ಚನ್ನಬಸಪ್ಪ : ಮೊದಲನೆಯದಾಗಿ ಅಲ್ಲಿ ದಷ್ಟ ಶಕ್ತಿಗಳು ಹೆಚ್ಚಾಗಿರಬೇಕು. ಹಲ್ಲೂರು ಗ್ರಾಮದಲ್ಲಿ 15 ಮೈಲು ಸುತ್ತು ಮುತ್ತಲೂ ಅಂಥ ದಷ್ಟ ಶಕ್ತಿಗಳು ಬಹಳ ಕಡಿಮೆ ಇವೆ. ಆದ್ದರಿಂದ ಅದರ ಅವಶ್ಯಕತೆ ಇಲ್ಲವೆಂದು ಹೇಳಿದ್ದೇವೆ.

ಶ್ರೀಮತಿ ರಾಧಾ ಭಟ್ : ಹಲ್ಲೂರಿನ ಸುತ್ತು ಮುತ್ತಲೂ 7-8 ಸಾವಿರ ಜನಸಂಖ್ಯೆ ಇದೆ. ಅಲ್ಲಿ ರತಕ್ಕಂತಹ ಜನರಿಗೆ ಪೋಲೀಸ್ ಠಾಣೆ ಇಲ್ಲದೆ ಬಹಳ ತೊಂದರೆಯಾಗುತ್ತಿದೆ ಆದ್ದರಿಂದ ಅಲ್ಲಿ ಒಂದು ಠಾಣೆಯನ್ನು ಮಾಡಬೇಕೆಂದು ಸರ್ಕಾರಕ್ಕೂ ಹೇಳಿದ್ದೇನೆ. ಆ ದೃಷ್ಟಿಯಿಂದ ಆದಷ್ಟು ಜಾಗ್ರತೆ ಅದನ್ನು ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದುವರೆಗೂ ಅಲ್ಲಿ ದುಷ್ಟ ಶಕ್ತಿಗಳು ಇಲ್ಲದಿದ್ದುದು ಕಂಡು ಬಂದುದರಿಂದ ಸದ್ಯಕ್ಕೆ ಪೋಲೀಸ್ ಠಾಣೆಯ ಅವಶ್ಯಕತೆ ಇಲ್ಲವೆಂದು ಕಾಣುತ್ತದೆ. ಅದಲ್ಲದೇ ಅದರ 15 ಮೈಲು ಸುತ್ತಮುತ್ತಲು ಅಂಥ ವರ್ಕ್ ವೆನ್‌ಶನಿಂಗ್ ಅಫೆನ್ಸ್ ಒಂದೂ ಇಲ್ಲ. ಜೊತೆಗೆ ಹಲ್ಲೂರು ಸುಂಕಸಾಲ್ ಔಟ್‌ಪೋಸ್ಟಿಗೆ ಸೇರಿದೆ. ಕಳೆದ ಕೆಲವು ವರ್ಷಗಳಿಂದ ಅಲ್ಲಿ ಆಗತಕ್ಕಂತಹ ಅಪರಾಧಗಳ ಸಂಖ್ಯೆ ಬಹಳ ಕಡಿಮೆ ಇದ್ದುದರಿಂದ ಆ ಔಟ್ ಪೋಸ್ಟಿಗೆ ಬೇಕಾದಷ್ಟು ಕೆಲಸವಿಲ್ಲ. ಹಾಗಿರುವಾಗ ಏತಕ್ಕೊಂದು ಮಾಡುವುದರ ಅವಶ್ಯಕತೆ ಇಲ್ಲ. ಅಲ್ಲಿ ದುಷ್ಟ ಶಕ್ತಿಗಳು ಹೆಚ್ಚಿದ್ದರೆ ನೋಡೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪೋಲೀಸ್ ಸ್ಟೇಷನ್ ಕೊಡಬೇಕಾದರೆ ಅಲ್ಲಿ ದುಷ್ಟ ಶಕ್ತಿಗಳು ಹೆಚ್ಚು ಇರಬೇಕೆಂದು ಮಂತ್ರಿಯವರು ಹೇಳುತ್ತಿದ್ದಾರೆ. ಅಂದರೆ ಈಗ ಸ್ಟೇಷನ್ನುಗಳು ಇರುವ ಕಡೆ ದುಷ್ಟ ಶಕ್ತಿಗಳು ಜಾಸ್ತಿ ಇವೆ ಮತ್ತು ಮುಂದೆ ದುಷ್ಟ ಶಕ್ತಿಗಳು ಜಾಸ್ತಿಯಾದರೆ ಪೋಲೀಸ್ ಸ್ಟೇಷನ್ ಕೊಡುತ್ತೇವೆ ಎಂದು ಅಭಿಪ್ರಾಯವೇ ; ಅಥವಾ ಏನಾದರೂ ಒಂದು ಇದಕ್ಕೆ ಕ್ರೈಟೀರಿಯಾ ಇಟ್ಟುಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಅಲ್ಲಿ ಒಂದು ಔಟ್‌ಪೋಸ್ಟ್ ಇದ್ದು ಅದಕ್ಕೆ ಸಾಕಷ್ಟು ಕೇಸುಗಳು ಇಲ್ಲದಿರುವಾಗ ಇನ್ನೊಂದು ಮಾಡಿ ಅನಾವಶ್ಯಕವಾಗಿ ಏಕೆ ಖರ್ಚು ಮಾಡುವುದು ಎಂದು.

ಶ್ರೀ ಕೆ ಆರ್. ಶ್ರೀನಿವಾಸಲು ನಾಯುಡು.—ಕೆಲವು ಸಂದರ್ಭಗಳಲ್ಲಿ ಟೆರಿಟೋರಿಯಲ್ ಜೂರಿಸ್ಡಿಕ್ಷನ್ ವ್ಯತ್ಯಾಸವಾದಾಗ ಅಲ್ಲಿ ಕೆಲವು ತೊಂದರೆಗಳು ಬರುತ್ತವೆ. ಸರ್ಕಾರದವರು ಹಾಗೆ ಗ್ರಾಮಗಳನ್ನು ರೀಗ್ರೂಪಿಂಗ್ ಮಾಡತಕ್ಕ ಕಾಲದಲ್ಲಿ ಏನಾದರೂ ತೊಂದರೆ ಕಂಡುಬಂದರೆ ಅಲ್ಲಿಗೆ ಪೋಲೀಸ್ ಸ್ಟೇಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೆಲ್ಲಿ ಸಾರ್ವಜನಿಕರಿಂದ ಮನವಿಗಳು ಬರುತ್ತವೆಯೋ ಅಲ್ಲಿ, ಒಂದು ವೇಳೆ ಸಾರ್ವಜನಿಕರಿಂದ ಮನವಿಗಳು ಬಾರದಿದ್ದರೂ ಅಲ್ಲಿ ಅದರ ಅಗತ್ಯ ಕಂಡುಬಂದರೆ ಸರ್ಕಾರದವರೇ ಅದನ್ನು ಮಾಡುತ್ತಾರೆ.

ಶ್ರೀ ಟಿ. ಎಂ. ಮಂಜುನಾಥನ್.—ಫಲಾನಿ ಸ್ಥಳಕ್ಕೆ ಒಂದು ಪೋಲೀಸ್ ಸ್ಟೇಷನ್ನನ್ನು ಮಂಜೂರು ಮಾಡಬೇಕಾಗಿದ್ದರೆ ಆ ವಿಚಾರದಲ್ಲಿ ಇಂಥ ಪ್ರದೇಶದಲ್ಲಿ ಇಂತಿಷ್ಟು ಜನ ಹುಡು ಪೋಕರಿಗಳಿದ್ದಾರೆಂದು ಕಳ್ಳಸಿತಕ್ಕೆ ವರದಿ ಆಧಾರದ ಮೇಲೆ ಅದನ್ನು ಮಂಜೂರು ಮಾಡುತ್ತೀರೋ ಅಥವಾ ಸಾರ್ವಜನಿಕರ ಮನವಿಗಳ ಆಧಾರದ ಮೇಲೆ ಮಾಡುತ್ತೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ಉತ್ತರ ಹೇಳಿದಾಗ ಮಾನ್ಯ ಸದಸ್ಯರು ಬೇರೆ ಗಮನದಲ್ಲಿದ್ದಂತೆ ಕಾಣುತ್ತದೆ. ಅದರ ಅಗತ್ಯ ಕಂಡು ಬಂದರೆ ಸಾರ್ವಜನಿಕರಿಂದ ಅರ್ಜಿ ಬಾರದಿದ್ದರೂ ಅದನ್ನು ಮಂಜೂರು ಮಾಡಲಾಗುತ್ತದೆಂದು ಹೇಳಿದ್ದೇನೆ. ಆದರೆ ಇಲ್ಲಿ 15 ಮೈಲುಗಳ ಸುತ್ತಳತೆ ಯೊಳಗೆ ಅಂಥ ದುಷ್ಟ ಶಕ್ತಿಗಳು ಯಾರೂ ಇರುವುದಿಲ್ಲವಾದ್ದರಿಂದ ಅಲ್ಲಿಗೆ ಸದ್ಯಕ್ಕೆ ಇದು ಅನಗತ್ಯ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಈ ಅಮ್ಮಿನ ಹಳ್ಳಿಯಲ್ಲಿ ಪೋಲೀಸ್ ಸ್ಟೇಷನ್ನನ್ನು ಸ್ಥಾಪಿಸತಕ್ಕ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುವುದಕ್ಕೆ ಸಾಧ್ಯವಾಗಿ ಇಲ್ಲಿಗೆ 5 ವರ್ಷಗಳು ಕಳೆದವು ಅಲ್ಲಿ 15 ಮೈಲಿ ಸುತ್ತಳತೆಯೊಳಗೆ ಯಾವ ಪೋಲೀಸ್ ಠಾಣೆಯೂ ಇಲ್ಲ. ಆದ್ದರಿಂದ ಅಲ್ಲಿಗೆ ಬೇಗ ಇದನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ಜಾಗ್ರತೆ ವಿಚಾರ ಮಾಡಿಸು ವುದಕ್ಕೆ ಪ್ರಯತ್ನ ಮಾಡತ್ತೇನೆ ಆದರೆ ಅದನ್ನು ಜಾಗ್ರತೆ ಮಂಜೂರು ಮಾಡಿಸುವ ವಿಷಯದಲ್ಲಿ ನಾನು ಯಾವ ಭರವಸೆಯನ್ನೂ ಇಲ್ಲಿ ಹೇಳಲಾರೆ. ಆದರೆ 15 ಮೈಲಿಯೊಳಗೆ ಅಲ್ಲಿ ಯಾವ ಪೋಲೀಸ್‌ಠಾಣೆ ಇರುವುದಿಲ್ಲ ಎಂಬುದೇ ಅಲ್ಲಿಗೆ ಸ್ಟೇಷನನ್ನು ಕೊಡುವುದಕ್ಕೆ ಒಂದು ಕ್ವೆಶ್ಚನ್ ಆಫ್ ಪಾಲಿಸಿಯಾ ಸಾಲದ. ಮುಖ್ಯ ವಾಗಿ ಅಲ್ಲಿ ಅದರ ಅವಶ್ಯಕತೆ ಇದ್ದರೆ ಮಾಡೋಣ—ಇಲ್ಲದಿದ್ದರೆ ಬಿಡೋಣ.

ಶ್ರೀಮತಿ ರಾಧಾಬಾಯಿ.—ಅಲ್ಲಿ ಕಣ್ಣಿಗೆ ಕಾಣಿಸದ ದುಷ್ಟ ಶಕ್ತಿಗಳು ತುಂಬಾ ಇವೆ. ಅದನ್ನೇ ನಾನು ಗಮನದಲ್ಲಿಟ್ಟುಕೊಂಡು ಇದನ್ನು ಸರ್ಕಾರದವರ ಗಮನಕ್ಕೆ ತರಬೇಕಾಯಿತು. ಆದರೆ ಇದು ಸರ್ಕಾರದವರ ಕಣ್ಣಿಗೆ ದುಷ್ಟ ಶಕ್ತಿಗಳು ಕಾಣಿಸದಿದ್ದರೂ ನಾಳೆ ಕಂಡೇಕಾಣಿಸ ತ್ತಾರೆ. ಆದರೆ ಅವರು ಹಾಗೆ ಕಾಣಿಸಿಕೊಳ್ಳುವುದಕ್ಕೆ ಮುನ್ನವೇ ಎಚ್ಚರಿಕೆ ತೆಗೆದುಕೊಂಡು ಇದನ್ನು ಮಾಡ ಲೆಂದು ಮಾಡಿದ್ದೇನೆ. ಆದರೆ ಅಮ್ಮಿನಹಳ್ಳಿಯದನ್ನಾದರೂ ಬೇಗ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಷ್ಟೇ ಕಾಲದಲ್ಲಿ ಎಂದು ಹೇಳಲಾರೆ. ಆದರೆ ಆದಷ್ಟು ಬೇಗ ಪ್ರಯತ್ನ ಮಾಡಲಾಗುತ್ತದೆ.

Questions for Answer another day (but not taken up)

GRANTS TO READING ROOMS IN BILGI TALUK

947. Sri G. P. NANJAYYANAMATH (Guledgud).—Will the Minister of State for Youth Services be pleased to state :—

(*a*) the number of villages having reading rooms in Bilgi Taluk of Bijapur District ;

(*b*) the Year-wise grant-in-aid paid to these Libraries since 1968-69 to date ;

(*c*) whether all libraries are in receipt of grant-in-aid every year ; if not the action taken by the Government or proposed to be taken to pay grant-in-aid ;

(*d*) the probable period required for the payment of arrears of grant-in-aid to the Libraries which have not received so far ?

SRI V. S. KOUJALGI (Minister of State for Youth Services).—

(*a*) There are no Reading Rooms in the villages of Bilgi Taluk, Bijapur District, which are recognised as grant-in-aid institutions by the Department of Libraries ;

(*b*) Nil.

(*c*) Does not arise in view of reply to clause (*a*) above

(*d*) Also does not arise in view of reply to clause (*a*) above.